## ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ ಕಛೇರಿ ನಡವಳಿಗಳು

ವಿಷಯ: ಚಿಕ್ಕಮಗಳೂರು ತಾಲೂಕು ಜಾಗರ ಹೋಬಳಿ ಮೇಲಿನಹುಲುವತ್ತಿ ಗ್ರಾಮದ ಸ ನಂ 27ರಲ್ಲಿ 17-00 ಎಕರ ಸರ್ಕಾರಿ ಜಮೀನನ್ನು ರಾಷ್ಟ್ರೀಯ ಹೆದ್ದಾರಿ 173ರ ಕಿ.ಮೀ 24.60 (ಮೂಗಿಹಳ್ಳಿ) ಯಿಂದ ಕಿ.ಮೀ 70.063 (ಕಡೂರು) ವರೆಗಿನ ದ್ವಿಪಥದ ರಸ್ತೆ ಅಗಲೀಕರಣಕ್ಕಾಗಿ ಜಮೀನು ಕಾಯ್ದಿರಿಸಿ ವರ್ಗಾವಣೆ ಮಾಡುವ ಬಗ್ಗೆ.

ಉಲ್ಲೇಖ:
1. ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನ ರವರ ಪತ್ರದ ಸಂಖ್ಯೆ ಕಾಇಂ/ರಾಹೆವಿ/ಹಾಸನ/ಸ ಇಂ-01/ಎನ್ ಹೆಚ್ – 173/JOB-873 ಅರಣ್ಯ/2020-21/1488 ದಿನಾಂಕ: 24-03-2021.
2. ತಹಸೀಲ್ದಾರ್, ಚಿಕ್ಕಮಗಳೂರು ರವರ ಪತ್ರದ ಸಂಖ್ಯೆ ಎಲ್ ಎನ್ ಡಿ ಸಿಆರ್ 37/2021-22 ದಿನಾಂಕ: 25.05.2021.
3. ಉಪವಿಭಾಗಾಧಿಕಾರಿಗಳು, ಚಿಕ್ಕಮಗಳೂರು ರವರ ಪತ್ರದ ಸಂಖ್ಯೆ ಎಲ್ ಎನ್ ಡಿ ಸಿಆರ್ 59/2021-22

***

ಪ್ರಸ್ತಾವನೆ:

ರಾಷ್ಟ್ರೀಯ ಹೆದ್ದಾರಿ 173ರಲ್ಲಿ ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ. ಈ ಕಾಮಗಾರಿಯು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿಯೂ ನಡೆಯುತ್ತಿದೆ. ಅದರಂತೆ NH 173ರ ಕಿ.ಮೀ 24.60 ಮೂಗ್ತಿಹಳ್ಳಿಯಿಂದ ಕಿ.ಮೀ 70.063 (ಕಡೂರು) ವರೆಗೆ ದ್ವಿಪಥ ರಸ್ತೆಯಾಗಿ ಅಗಲೀಕರಣ ನಡೆಯುತ್ತಿದ್ದು, ಈ ಕಾಮಗಾರಿಗೆ ಚಿಕ್ಕಮಗಳೂರು ತಾಲ್ಲೂಕಿನ ಹಿರೇಗೌಜ ಇತರೆ 3 ಗ್ರಾಮ ಮತ್ತು ಕಡೂರು ತಾಲ್ಲೂಕಿನ ಸಖರಾಯಪಟ್ಟಣ ಇತರೆ ಗ್ರಾಮಗಳಲ್ಲಿ ಈ ಕೆಳಗಿನಂತೆ ಪ್ರದೇಶವು ಅಗಲೀಕರಣಕ್ಕೆ ಬಳಕೆಯಾಗಲಿದೆ

| ಕ್ರ ಸಂ | ತಾಲ್ಲೂಕು | ಗ್ರಾಮ | ಸ ನಂ | ವಿಸ್ತೀರ್ಣ (ಎಕರೆ) | ಪಹಣಿ ಕಾಲಂ 9 ರಂತೆ ಹಕ್ಕುಬಾಧ್ಯತೆ |
|---|---|---|---|---|---|
| 1 | ಚಿಕ್ಕಮಗಳೂರು | ಹಿರೇಗೌಜ | 112 | 2.03 | ಕಂದಾಯ ಜಮೀನು |
| | | ದೇವರಹಳ್ಳಿ | 46 | 0.33 | ಸರ್ಕಾರಿ ಜಮೀನು |
| | | | 59 | 0.14 | ಗೋಮಾಳ |
| | | | 60 | 2.32 | ಗೋಮಾಳ |
| | | ದಾಸರಹಳ್ಳಿ | 59 | 0.07 | ಅರಣ್ಯ |
| | | | 60 | 2.06 | ಅರಣ್ಯ |
| | | ಹಳೆ ಲಕ್ಯಾ | 118 | 0.35 | ಅರಣ್ಯ |
| 2 | ಕಡೂರು | ಸಖರಾಯ ಪಟ್ಟಣ | 744 | 7.10 | ಅರಣ್ಯ |
| | | | 74 | 0.07 | ಅರಣ್ಯ |
| | | ಬ್ರಹ್ಮಸಮುದ್ರ | 302 | 0.11 | ಗೋಮಾಳ |
| | | ಎಮ್ಮೆದೊಡ್ಡಿ | 1 | 0.12 | ಗೋಮಾಳ |
| | | | ಒಟ್ಟು | 17-10 | |

ಮೇಲ್ಕಂಡ ಪ್ರದೇಶಗಳು ಅರಣ್ಯ ಇಲಾಖೆಗೆ ಸೇರಿದ ಪರಿಭಾವಿತ ಅರಣ್ಯಕ್ಕೆ ಸೇರಿದ ಭೂಮಿಯಾಗಿರುವುದರಿಂದ ಸದರಿ ಭೂಮಿಯನ್ನು ರಸ್ತೆ ಅಗಲೀಕರಣಕ್ಕೆ ಬಳಸಿಕೊಳ್ಳುವುದಾದಲ್ಲಿ Forest Clearance ಪಡೆದ ನಂತರವೇ ರಸ್ತೆ ಕಾಮಗಾರಿಗೆ ಬಳಸಬೇಕಾಗುವುದೆಂದು ಅರಣ್ಯ ಇಲಾಖೆಯಿಂದ Forest Clearance ಪಡೆಯಲು ಮೇಲ್ಕಂಡ ಭೂಮಿಗೆ ಪರ್ಯಾಯವಾಗಿ ಅರಣ್ಯ ಇಲಾಖೆಗೆ ಮೇಲಿನಂತೆ 17-10 ಎಕರೆ (6.967ಹೆಕ್ಟೇರ್) ನೀಡಬೇಕಿದೆಯೆಂದು ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನ ರವರು ಉಲ್ಲೇಖ(1)ರಲ್ಲಿ ವರದಿಸಿದ್ದಾರೆ.

Scanned by CamScanner

ಈ ಬಗ್ಗೆ ಪರ್ಯಾಯ ಭೂಮಿಯನ್ನು ನೀಡುವ ವಿಚಾರದಲ್ಲಿ ತಹಸೀಲ್ದಾರ್, ಚಿಕ್ಕಮಗಳೂರು ಹಾಗೂ ಉಪವಿಭಾಗಾಧಿಕಾರಿ, ಚಿಕ್ಕಮಗಳೂರು ಇವರು ಉಲ್ಲೇಖ(2) ಹಾಗೂ (3) ರಲ್ಲಿ ವರದಿ ನೀಡುತ್ತಾ, ಚಿಕ್ಕಮಗಳೂರು ತಾಲ್ಲೂಕು ಜಾಗರ ಹೋಬಳಿ ಮೇಲಿನಹುಲುವತ್ತಿ ಗ್ರಾಮದ ಸ ನಂ 27ರಲ್ಲಿ ಒಟ್ಟು 451-11 ಎಕರೆ ಗೋಮಾಳ ವರ್ಗದ ಭೂಮಿ ಇದೆಯೆಂದು, ಗ್ರಾಮದಲ್ಲಿ ಒಟ್ಟು 2232-27 ಎಕರೆ ಗೋಮಾಳವಿದ್ದು, ಜಾನುವಾರು ಸಂಖ್ಯೆ 218 ಗಳಿಗೆ ಸಾಕಷ್ಟು ಗೋಮಾಳ ಲಭ್ಯವಿದೆಯೆಂದು, ಮುಂದುವರೆದು ಈ ಪ್ರದೇಶದಲ್ಲಿ ಯಾವುದೇ ಅನಧಿಕೃತ ಸಾಗುವಳಿ ಇಲ್ಲವೆಂದು ಹಾಗೂ ಅರಣ್ಯ ಇಲಾಖೆಯ ವ್ಯಾಪ್ತಿಗೆ ಸೇರಿಲ್ಲವೆಂದು ಎಲ್ಲಾ ರೀತಿಯಿಂದ ಮುಕ್ತವಿದೆಯೆಂದು, ಆದಕಾರಣ ಈ ಭೂಮಿಯಲ್ಲಿ 17-00 ಎಕರೆಯನ್ನು ಅರಣ್ಯ ಇಲಾಖೆಗೆ ಪರ್ಯಾಯವಾಗಿ ಭೂಕಂದಾಯ ಕಾಯ್ದೆ ಕಲಂ 71ರಡಿ ಅರಣ್ಯ ಇಲಾಖೆಗೆ ಕಾಯ್ದಿರಿಸಬಹುದೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಅವಲೋಕಿಸಿ, ದಾಖಲೆಗಳನ್ನು ಪರಿಶೀಲಿಸಿ, ರಾಷ್ಟ್ರೀಯ ಹೆದ್ದಾರಿ ನಂ 173ರ ರಸ್ತೆ ಅಗಲೀಕರಣ ಕಾಮಗಾರಿಗೆ ,ಮೇಲ್ಕಂಡ ಭೂಮಿಯ ಅವಶ್ಯಕತೆ ಇರುವುದನ್ನು ಮನಗಂಡು ಹಾಗೂ ಸದರಿ ಭೂಮಿಯು ಅರಣ್ಯ ಇಲಾಖೆಯ ಪರಿಭಾವಿತ ಅರಣ್ಯ ವ್ಯಾಪ್ತಿಗೆ ಗುರುತಿಸಿರುವುದರಿಂದ, ಸದರಿ ಭೂಮಿಗೆ ಪರ್ಯಾಯವಾಗಿ ಅರಣ್ಯ ಇಲಾಖೆಗೆ ಭೂಮಿ ನೀಡುವುದು ಸೂಕ್ತವೆಂದು ಮನಗಂಡು ಈ ಕೆಳಗಿನಂತೆ ಭೂಮಿ ಕಾಯ್ದಿರಿಕೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ:ಎಂ2 ಎಲ್ ಎನ್ ಡಿ ಸಿಆರ್: 518 /2020-21 ದಿನಾಂಕ: 19 - 06 - 2021**

ಪ್ರಸ್ತಾವನೆ ಅಂಶಗಳನ್ನು ಗಣನೆಗೆ ತೆಗೆದುಕೊಂಡು ರಾಷ್ಟ್ರೀಯ ಹೆದ್ದಾರಿ ನಂ 173ರ ಕಿ.ಮೀ 24-60 (ಮೂಗ್ತಿಹಳ್ಳಿ) ಯಿಂದ ಕಿ.ಮೀ 70.063(ಕಡೂರು)ವರೆಗಿನ ರಸ್ತೆ ಅಗಲೀಕರಣ ಬಳಕೆಗಾಗಿ ಪ್ರಸ್ತುತದ ಅರಣ್ಯ ವ್ಯಾಪ್ತಿಯ ಭೂಮಿ ಬಳಸಿಕೊಂಡು ಅರಣ್ಯ ಇಲಾಖೆಗೆ ಪರ್ಯಾಯವಾಗಿ ನೀಡುವ ಬಗ್ಗೆ ಈ ಕೆಳಗಿನಂತೆ ಆದೇಶಿಸಿದೆ.

1. ಭೂಕಂದಾಯ ನಿಯಮ 1966ರ ನಿಯಮ 97(4) ರಂತೆ ಈ ಕೆಳಗಿನಂತೆ ಭೂಮಿಯನ್ನು ಗೋಮಾಳ ವರ್ಗದಿಂದ ತಗ್ಗಿಸಿ, ಭೂಕಂದಾಯ ಕಾಯ್ದೆ 1964ರ ಕಲಂ 71ರಡಿ ಅರಣ್ಯ ಇಲಾಖೆಗೆ ಕಾಯ್ದಿರಿಸಲಾಗಿದೆ.

| ತಾಲ್ಲೂಕು | ಹೋಬಳಿ | ಗ್ರಾಮ | ಸ ನಂ | ವಿಸ್ತೀರ್ಣ (ಎಕರೆ) | ಹಕ್ಕುದಾಖಲಿಸಬೇಕಾದ ವಿವರ |
|---|---|---|---|---|---|
| ಚಿಕ್ಕಮಗಳೂರು | ಜಾಗರ | ಮೇಲಿನಹುಲುವತ್ತಿ | 27 | 17.00 | ಅರಣ್ಯ ಇಲಾಖೆಗೆ ಅರಣ್ಯೀಕರಣಕ್ಕೆ |

- ಮೇಲಿನಂತೆ ಕಂದಾಯ ದಾಖಲೆಯಲ್ಲಿ ಹಕ್ಕು ದಾಖಲಿಸಲು ತಹಸೀಲ್ದಾರ್, ಚಿಕ್ಕಮಗಳೂರು ಇವರಿಗೆ ಸೂಚಿಸಿದೆ.
- ಅದೇ ರೀತಿ ಮೇಲಿನ ಭೂಮಿಯ ಸರಹದ್ದು/ಚಕ್ಕುಬಂದಿ ನಿಗದಿಪಡಿಸಿ ಪೋಡಿ ಕ್ರಮವಹಿಸಲು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಚಿಕ್ಕಮಗಳೂರು ಇವರಿಗೆ ನಿರ್ದೇಶಿಸಿದೆ.

2. ಅರಣ್ಯ ಇಲಾಖೆಯ ಪರಿಭಾವಿತ ಅರಣ್ಯಕ್ಕಾಗಿ ನಿಗದಿಗೊಂಡಿರುವ ಈ ಕೆಳಕಂಡ ಭೂಮಿಯನ್ನು ರಾಷ್ಟ್ರೀಯ ಹೆದ್ದಾರಿ ನಂ 173ರ ರಸ್ತೆಗಾಗಿ ಕಾಯ್ದಿರಿಸಿ ಆದೇಶಿಸಿದೆ.

Scanned by CamScanner

| ಕ್ರಸಂ | ತಾಲ್ಲೂಕು | ಹೋಬಳಿ | ಗ್ರಾಮ | ಸ ನಂ | ವಿಸ್ತೀರ್ಣ (ಎಕರೆ) | ಹಕ್ಕುದಾಖಲಿಸಬೇಕಾದ ವಿವರ |
|---|---|---|---|---|---|---|
| 1 | ಚಿಕ್ಕಮಗಳೂರು | ಲಕ್ಯಾ | ಹಿರೇಗೌಜ | 112 | 2.03 | ರಾಷ್ಟ್ರೀಯ ಹೆದ್ದಾರಿ ನಂ 173ರ ರಸ್ತೆಗಾಗಿ |
| | | | ದೇವರಹಳ್ಳಿ | 46 | 0.33 | |
| | | | | 59 | 0.14 | |
| | | | | 60 | 2.32 | |
| | | | ದಾಸರಹಳ್ಳಿ | 59 | 0.07 | |
| | | | | 60 | 2.06 | |
| | | | ಹಳೆ ಲಕ್ಯಾ | 118 | 0.35 | |
| 2 | ಕಡೂರು | ಸಖರಾಯ ಪಟ್ಟಣ | ಸಖರಾಯ ಪಟ್ಟಣ | 744 | 7.10 | |
| | | | | 74 | 0.07 | |
| | | | ಬ್ರಹ್ಮಸಮುದ್ರ | 302 | 0.11 | |
| | | ಬೀರೂರು | ಎಮ್ಮೆದೊಡ್ಡಿ | 1 | 0.12 | |
| | | | | ಒಟ್ಟು | 17-10 | |

- ಮೇಲಿನಂತೆ ಕಂದಾಯ ದಾಖಲೆಗಳಲ್ಲಿ ಹಕ್ಕು ದಾಖಲಿಸಲು ತಹಸೀಲ್ದಾರ್, ಚಿಕ್ಕಮಗಳೂರು ಮತ್ತು ಕಡೂರು ಇವರಿಗೆ ಸೂಚಿಸಲಾಗಿದೆ.
- ಅದೇ ರೀತಿ ಮೇಲಿನ ಜಮೀನುಗಳ ಹದ್ದುಬಸ್ತು ಹಾಗೂ ಪೋಡಿ ಕ್ರಮವಹಿಸಲು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಚಿಕ್ಕಮಗಳೂರು , ಕಡೂರುರವರಿಗೆ ಸೂಚಿಸಿದೆ.

ಈ ಆದೇಶವು ಭೂಕಂದಾಯ ಕಾಯ್ದೆ ಹಾಗೂ ನಿಯಮಗಳಿಗೆ ಬದ್ಧವಾಗಿರುವುದೆಂದು ಸ್ಪಷ್ಟಪಡಿಸಲಾಗಿದೆ.

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

<u>ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.</u>

1. ಉಪಅರಣ್ಯಸಂರಕ್ಷಣಾಧಿಕಾರಿ, ಚಿಕ್ಕಮಗಳೂರು.
2. ಉಪವಿಭಾಗಾಧಿಕಾರಿ, ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು
3. ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನ
4. ತಹಸೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರುರವರಿಗೆ ಆದೇಶದ ಪ್ರತಿ ಹಾಗೂ ಸಂಬಂಧಪಟ್ಟ ಮೂಲ ಕಡತದೊಂದಿಗೆ
5. ಭೂದಾಖಲೆಗಳ ಸಹಾಯಕ ನಿರ್ದೇಶಕರು, ಚಿಕ್ಕಮಗಳೂರು / ಕಡೂರು
6. ತಹಶೀಲ್ದಾರ್ ಕಡೂರು ತಾಲ್ಲೂಕು ಕಡೂರು ಇವರಿಗೆ ಆದೇಶದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

Scanned by CamScanner